೭.೩೫ ಲಕ್ಷ ರೂ.ಗಳ ಅಂದಾಜು ವೆಚ್ಚದಲ್ಲಿ ಆಳಂದ ಪಟ್ಟಣಕ್ಕೆ ಹೊನ್ನಳ್ಳಿ ಕೆರೆಯಿಂದ ಕುಡಿಯುವ ನೀರನ್ನು ಪೂರೈಸಲು ಒಂದು ಸುಧಾರಣಾ ಯೋಜನೆಯನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಕಳುಹಿಸಿದೆ. ಈ ಸುಧಾರಣಾ ಯೋಜನೆಯಲ್ಲಿ ಹೊನ್ನಳ್ಳಿ ಕೆರೆಯ ಜಾಗದಲ್ಲಿ ೧೦ ಮೀಟರ್ ವ್ಯಾಸ ೯ ಮೀಟರ್ ಆಳದ ತೋಡುಬಾವಿ, ಪಂಪಿನ ಮನೆ, ಏರು ಕೊಳವೆ ಮಾರ್ಗ ಹಾಗೂ ೧೨ ಅಶ್ವ ಶಕ್ತಿ ವಿದ್ಯುತ್ ಚಾಲಿತ ಪಂಪುಗಳನ್ನು ಅಳವಡಿಸಲು ಯೋಜಿಸಲಾಗಿದೆ. ಈ ಯೋಜನೆಗೆ ಬೇಕಾದ ೭.೫೫ ಲಕ್ಷ ರೂ. ಗಳನ್ನು ಮುಖ್ಯಮಂತ್ರಿಗಳ ಬರ ಪರಿಹಾರ ನಿಧಿಯಿಂದ ೧೭-೨-೧೯೮೭ರಂದು ಗುಲ್ಬರ್ಗಾ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ.

ಇದಲ್ಲದೆ ಆಳಂದ ಪಟ್ಟಣದಲ್ಲಿ ೨ ಲಕ್ಷ ಗ್ಯಾಲನ್ ಸಾಮರ್ಥ್ಯದ ಇನ್ನೊಂದು ಕೆಳಮಟ್ಟದ ಜಲ ಸಂಗ್ರಹಾಗಾರವನ್ನು ಕಟ್ಟಲಂ ೭.೦೦ ಲಕ್ಷ ರೂ.ಗಳ ಅಂದಾಜನ್ನು ತಯಾರಿಸಲಾಗಿದ್ದು ಇದಕ್ಕೆ ಬೇಕಾಗಿರುವ ಹಣ ಆಳಂದ ಪುರಸಭೆ ಭರಿಸಲು ಅಸಮರ್ಥವಾಗಿರುವುದರಿಂದ ಸರ್ಕಾರಕ್ಕೆ ಸಾಲ ನೀಡಲು ಕೇಳಿ ಕೊಂಡಿದ್ದಾರೆ. ಈ ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತಿದೆ.

ಶ್ರೀ ಶರಣಬಸಪ್ಪ ಮಾಲಿ ಪಾಟೀಲ್.—೭.೫೫ ಲಕ್ಷ ರೂಪಾಯಿಗಳನ್ನು ಮುಖ್ಯಮಂತ್ರಿಗಳ ಬರ ಗಾಲ ಪರಿಹಾರ ನಿಧಿಯಿಂದ ಬಿಡುಗಡೆ ಮಾಡಲಾಗಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ ಆದರೆ ಇದು ಇಲ್ಲಿಯವರೆಗೆ ದುಡ್ಡು ಬಂದಿಲ್ಲ. ಆ ಹಣ ಬಿಡುಗಡೆಯಾಗಿದೆಯೋ ಅಥವಾ ಇಲ್ಲವೋ?

ಶ್ರೀ ಎ. ಲಕ್ಷ್ಮೀಸಾಗರ್.—೭-೨-೧೯೮೭ರಲ್ಲಿ ಜಿಲ್ಲಾಧಿಕಾರಿಗಳಿಗೆ ಈ ಹಣವನ್ನು ಬಿಡುಗಡೆ ಮಾಡಲಾಗಿದೆ. ಜಿಲ್ಲಾಧಿಕಾರಿಗಳಿಂದ ನಿವಣಿಗೇನಾದರೂ ಹಣ ಬಂದಿಲ್ಲವೆಂದು ತಿಳಿಸಿದ್ದೇ ಆದರೆ ಆದರ ಬಗ್ಗೆ ಮುಂದಿನ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಶರಣಬಸಪ್ಪ ಮಾಲಿ ಪಾಟೀಲ್.—ಟೆಲೆಕ್ಸ್ ಮೆಸೇಜ್ ಬಂದಿದೆ. ಆದರೆ ಹಣ ಬಂದಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಅದನ್ನು ವಿಚಾರಿಸುತ್ತೇನೆ.

(3) ಮೈಸೂರು ಅರಗು ಮತ್ತು ಬಣ್ಣದ ಕಾರ್ಖಾನೆಯಲ್ಲಿ ಉದ್ಭವಿಸಿರುವ ಆಡಳಿತಾತ್ಮಕಸಮಸ್ಯೆ ಬಗ್ಗೆ.

ಶ್ರೀ ಜಿ. ರಾಜುಗೌಡ ಹನೂರ್.—ಅಧ್ಯಕ್ಷರೇ ನಾನು ಸರ್ಕಾರದ ಗಮನವನ್ನು ಈ ಕೆಳಗಿನ ವಿಷಯದ ಬಗ್ಗೆ ಸೆಳೆಯುತ್ತೇನೆ.

ರಾಜ್ಯ ಸರ್ಕಾರದವರ ಸ್ವಾಮ್ಯತ್ವದ ಸಂಸ್ಥೆಗಳಿಗೆ ಇರುವಂತಹ ವ್ಯವಸ್ಥಾಪಕ ನಿರ್ದೇಶಕರುಗಳ ಕಾರ್ಯವ್ಯಾಪ್ತಿ ಏನು ? ಮತ್ತು ಅಧ್ಯಕ್ಷರ ಕಾರ್ಯವ್ಯಾಪ್ತಿ ಏನು ? ಎಂಬುದನ್ನು ಸ್ಪಷ್ಟವಾಗಿ ನಿರ್ದಿಷ್ಟ ಪಡಿಸಿದ್ದರೆ, ಬಹುಶಃ ಮೈಸೂರು ಅರಗು ಮತ್ತು ಬಣ್ಣದ ಕಾರ್ಖಾನೆಗೆ ಇಂತಹ ವ್ಯವಸ್ಥೆ ಆಗುತ್ತಿರಲಿಲ್ಲ. ಯಾವ ನಿರ್ದೇಶಕರು ಸಿಜನ ಅಧಿಕಾರಿಗಳನ್ನು ಅಮಾನತ್ತಿನಲ್ಲಿಟ್ಟು ವಿಚಾರಣೆಗೆ ಒಳಪಡಿಸಿದ್ದರೋ ಅದೇ ನಿರ್ದೇಶಕರನ್ನು ಮತ್ತೆ ಕೆಲಸಕ್ಕೆ ತೆಗೆದುಕೊಂಡಿರತಕ್ಕದ್ದಾ ಸರಿಯೆ ? ಅದು ಕಾನೂನು ಬದ್ಧವಾಗಿದೆಯೋ ದಯವಮಾಡಿ ತಿಳಿಸಬೇಕು. ಎರಡನೆಯದು ಕಾರ್ಖಾನೆಯ ವ್ಯಾಪ್ತಿಯನ್ನು ಬಿಟ್ಟು ಬೇರೆ ಕಡೆ ಮುಂಡಳಿಯಂ ಸಭೆಯನ್ನು ಕರೆದಿರುವಂಥದ್ದು ಕಾನೂನು ಬದ್ಧವಾಗಿದೆಯೇ ? ಮತ್ತು ವ್ಯವಸ್ಥಾಪಕ ನಿರ್ದೇಶಕರು ಕಾರ್ಖಾನೆಯ ಅಧ್ಯಕ್ಷರ ಮೇಲೆ ಕಛೇರಿಯಲ್ಲಿದ್ದಂತಹ ಬೀರನ್ನು ಹೊಡೆದು ಳಿ ಸಾವಿರ ರೂಪಾಯಿಗಳನ್ನು ಕದ್ದಿರುವುದರ ಜೊತೆಗೆ ಕಾಗದ ಪತ್ರಗಳನ್ನು ಕದ್ದಿದ್ದಾರೆಂದು ಪೋಲೀಸ್ ನವರಿಗೆ ಏನಂ ಪಿರ್ಯಾದು ಕೊಟ್ಟಿದ್ದಾರೆ, ಅವರ ಬಗ್ಗೆ ಸರ್ಕಾರದಿಂದ ಅನುಮತಿಯನ್ನು ತೆಗೆದು ಕೊಂಡಿದ್ದಾರೆಯೇ ? ಬೋರ್ಡಿನ ತೀರ್ಮಾನದ ವಿರುದ್ಧ ಕೋರ್ಟಿಗೆ ಹೋಗಿ ತಡೆಯಾಜ್ಞೆ ತಂದಿರುವುದಕ್ಕೆ ಸರ್ಕಾರದಿಂದ ಅನುಮತಿಯನ್ನು ತೆಗೆದುಕೊಂಡಿದ್ದಾರೆಯೇ ? ಇದು ಆ ಅಧಿಕಾರಿಯ ಅಧಿಕಾರ ದುರುಪಯೋಗ ಅಲ್ಲವೆ ? ಮತ್ತೆ ೭-೮ ಲಕ್ಷ ರೂಪಾಯಿಗಳು ಬಸಪ್ಪನವರ ಹೆಸರಿನಲ್ಲಿ ಚಕ್‌ಗಳು ಬಂದಿವೆ. ಅವುಗಳನ್ನು ಎನ್‌ಕ್ಯಾಷ್ ಮಾಡಿಸಂವುದಕ್ಕೆ ಬಸಪ್ಪನವರ ಸಹಿ ಬೇಕಾಗಿದೆ. ಇದರ ಬಗ್ಗೆ ಏನು ಮಾಡಂತ್ತೀರಿ ?

ಶ್ರೀ ವೇದಾಂತ ಹೆಮ್ಮಿಗೆ.—ನಾನು ೪-೫ ಮುಖ್ಯಾಂಶಗಳ ಬಗ್ಗೆ ಸಂಬಂಧಪಟ್ಟ ಮಂತ್ರಿಗಳಿಂದ ವಿವರಣೆಯನ್ನು ಕೇಳುತ್ತೇನೆ. ಖಾಸಗಿ ಅಧ್ಯಕ್ಷರು ಬಂದ ಮೇಲೆ ಅವರ ಮೇಲೆ ಇರತಕ್ಕ ಒಂದು

ಚಾರ್ಜು ೭,೫ ಲಕ್ಷ ರೂಪಾಯಿಗಳನ್ನು ವ್ಯವಸ್ಥಾಪಕ ನಿರ್ದೇಶಕರು ಚಾಹಿರಾತಿಗಾಗಿ ಖರ್ಚು ಮಾಡಿದ್ದಾರೆನ್ನುವುದು ಎರಡನೆಯದು ೫೦ ಸಾವಿರ ರೂಪಾಯಿಗಳನ್ನು ವಿತರಕರ ಸಮ್ಮೇಳನಕ್ಕಾಗಿ ಖರ್ಚು ಮಾಡಿದ್ದಾರೆನ್ನುವುದು ೩ನೆಯದು ಕಾರ್ಖಾನೆಯಲ್ಲಿ ಏನು ಬಣ್ಣ ತಯಾರಾಗುತ್ತಿದೆ, ಆ ಬಣ್ಣವನ್ನು ತಯಾರು ಮಾಡುವುದಕ್ಕೆ ಬೇರೆ ಎಂಡು ಕಾರ್ಖಾನೆಗಳಿಗೆ ಪರವಾನಗಿಯನ್ನು ಕೊಟ್ಟಿದ್ದಾರೆನ್ನುವುದು, ಇದಕ್ಕೆ ಬೋರ್ಡ್ ಆಫ್ ಮ್ಯಾನೇಜ್‌ಮೆಂಟ್ ಅನುಮತಿಯನ್ನು ಕೊಟ್ಟಿಲ್ಲವೆನ್ನುವುದು ಆದರೆ ಬೋರ್ಡ್ ಆಫ್ ಮ್ಯಾನೇಜ್‌ಮೆಂಟ್ ಅದಕ್ಕೆ ಅನುಮತಿಯನ್ನು ಕೊಟ್ಟಿದೆ. ಆದರೂ ಇಲ್ಲ ಎಂದು ಹೇಳುತ್ತಾರೆ. ನಂತರ ಓವರ್ ಡ್ರಾಫ್ಟ್‌ಳಿ ಲಕ್ಷ ಇದ್ದುದು ೪೦ ಲಕ್ಷಕ್ಕೆ ಹೋಗಿದೆ ಎನ್ನುವುದು ೩ವಿಷ್ಟು ಚಾರ್ಜುಗಳನ್ನು ಖಾಸಗಿ ಅಧ್ಯಕ್ಷರು ಅಲ್ಲಿಗೆ ಬಂದ ಮೇಲೆ ವ್ಯವಸ್ಥಾಪಕ ನಿರ್ದೇಶಕರ ಮೇಲೆ ಮಾಡಿದ್ದಾರೆ. ಅವರು ಅಧಿಕಾರಕ್ಕೆ ಬಂದ ಒಂದು ವರ್ಷದಲ್ಲಿ ಒಂದು ಕಾಂಟಿಷನ್ ಆಯಿತು. In this Competition 119 factories, including the Mysore Lac and Paints competed. Mysore Lac and paints got two gold medals for its work. During this time.....(Interruption) Board Passed a resolution to Suspend the three officers. Again the same board after the non Official Chairman came to power.....

ಅಧ್ಯಕ್ಷರು.—ಸಾಮಾನ್ಯ ಚರ್ಚೆ ಬೇಡ. ವಿವರಣೆ ಕೇಳಿ.

ಶ್ರೀ ವೇದಾಂತ ಹೆವಿಮ್ಮಿಗೆ.—ಮತ್ತೆ ಅಧಿಕಾರಕ್ಕೆ ಬರಬೇಕೆಂದು ಸಸ್ಪೆನ್‌ಷನ್ ಕ್ಯಾನ್ಸಲ್ ಮಾಡಿದ್ದಾರೆ. ಇದನ್ನು ಹೇಗೆ ಒಪ್ಪಿದರು ? ಅಲ್ಲಿ ಒನೇ ತಾರೀಖು ಸಂಬಳ ಆಗಬೇಕಾಗಿತ್ತು.. ಒನೇ ತಾರೀಖು ಸಂಬಳವನ್ನು ಪಾವತಿ ಮಾಡಿದರು. ಅವರಿಗೆ ದಂಡ ಕೊಡಬೇಕೆಂದು ರಿಸಲ್ಯೂಷನ್ ಮಾಡಿದರು. ಬ್ಯಾಂಕಿಗೆ ಚಕ್ ಹೋಯಿತು, ಆದರೆ ಎಂ. ಡಿ. ಗೆ ಹಾಗೂ ಛೇರ್ಮನ್‌ಗೆ ಕ್ಯಾಷ್ ಕೊಟ್ಟಿಲ್ಲ. ಮತ್ತೆ ದಿವಾಕರ್ ಎಂಟರ್ ಪ್ರೈಸಸ್‌ನಿಂದ ೫೦ ಸಾವಿರ ರೂಪಾಯಿಗಳ ಸಾಲವನ್ನು ಪಡೆದುಕೊಂಡು ಬಂದು ಸಂಬಳವನ್ನು ಪಾವತಿ ಮಾಡಿದ್ದಾರೆ. ಕಾರ್ಖಾನೆ ನೌಕರರು ಸಾಮಾನ್ಯವಾಗಿ ಆಡಳಿತ ವರ್ಗಕ್ಕೆ, ಮೇನೇಜ್‌ಮೆಂಟ್‌ಗೆ ಸಪೋರ್ಟ್ ಮಾಡುವುದಿಲ್ಲ. But here the workers of the factory have supported the Managing Director. ಆದಕ್ಕೋಸ್ಕರ ನಾನು ಕೇಳುತ್ತಿದ್ದೇನೆ. In the interest of workers. I request the concerned Minister to immediately order for COD enquiry and I request the Minister to convince me about the clarifications asked.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಅಧ್ಯಕ್ಷರೇ, ಇಲ್ಲಿ ಏನಾಗಿದೆ ಎಂದರೆ, ಮಾನ್ಯ ರಾಜೂಗೌಡರು ಹೇಳುವುದು ಒಂದಾದರೆ ನಾವು ಹೇಳುವುದು ಒಂದಾಗಿದೆ, ಇಲ್ಲಿ ಇರತಕ್ಕ ಅಧ್ಯಕ್ಷರಿಗೆ ಕರಿಯಪ್ಪ ಗೌಡರಿಗೂ ಮತ್ತು ಮೇನೇಜಿಂಗ್ ಡೈರೆಕ್ಟರ್‌ರಿಗೂ ವ್ಯತ್ಯಾಸ ಬಂದಿದೆ ಎಂದು ಈಗಾಗಲೇ ಪತ್ರಿಕೆಗಳಲ್ಲಿ ಬಂದಿದೆ. ಹಾಗೂ ತಮ್ಮಲ್ಲಿ ರಿಪೋರ್ಟ್ ಇದೆ. ಅಲ್ಲಿ ಮೇನೇಜಿಂಗ್ ಡೈರೆಕ್ಟರ್ ಹೇಳುವುದು ಒಂದಾದರೆ, ಛೇರ್ಮನ್ ಹೇಳುವುದು ಒಂದು. ಇದರಿಂದ ಇವರಿಬ್ಬರ ವಂಧ್ಯ ಇರುವ ವರ್ಕರ್ಸ್ ಸಫರ್ ಆಗುತ್ತಿದ್ದಾರೆ. ಅಲ್ಲಿನ ವರ್ಕರ್ಸ್ ಡೆಲಿಗೇಷನ್ ನಮ್ಮ ಹತ್ತಿರ ಬಂದಿತ್ತು ಈ ಛೇರ್ಮನ್‌ರು ಹೊಸದಾಗಿ ಅಧಿಕಾರ ವಹಿಸಿಕೊಂಡ ಮೇಲೆ ೩ ಜನ ಸಸ್ಪೆಂಡ್ ಆದವರನ್ನು ರೀ ಇನ್‌ಸ್ಟೇಟ್ ಮಾಡಿದ್ದಾರೆ ಹಾಗೂ ಅಲ್ಲಿ ಡಿಸ್‌ಮಿಸ್ ಮಾಡಲಾಗಿದ್ದ ಸುಜಾತ ಎಂಬುವವರನ್ನು ಮತ್ತೆ ನೌಕರಿಗೆ ತೆಗೆದುಕೊಂಡು ಕೆಲಸ ಪ್ರಾರಂಭಿಸಿದ್ದಾರೆ ಎಂದು ನೌಕರರು ಹೇಳುತ್ತಾರೆ. ಇಂತಹ ಅಕ್ರಮ ಕಾರ್ಯಗಳು ನಡೆಯಬಾರದೆಂದು ಮೇನೇಜಿಂಗ್ ಡೈರೆಕ್ಟರ್‌ರವರು ಒಪ್ಪಲಿಲ್ಲವಾದ್ದರಿಂದ ಅವರು ಲೀವ್ ಮೇಲೆ ಹೋದ ಮೇಲೆ ಎಂತಹ ಕೆಲಸಕ್ಕೆ ಇಳಿದಿದ್ದಾರೆಂದರೆ ಅವರ ಅಲ್ಮೆರಾವನ್ನು ಹೊಡೆದು ರೆಕಾರ್ಡ್ಸ್‌ಗಳನ್ನು ತೆಗೆದುಕೊಳ್ಳತಕ್ಕ ಸ್ಥಿತಿಗೆ ಹೋಗಿದ್ದಾರೆ. ತಮಗೆ ಬೇಕಾದ ಸಿಬ್ಬಂದಿ ವರ್ಗವನ್ನು ಏನು ಇವರು ರೀ ಇನ್‌ಸ್ಟೇಟ್ ಮಾಡಿದ್ದಾರೆ ಅಂತಹವರು ಈ ಕೆಲಸ ಮಾಡಿದ್ದಾರೆ. ಇಂತಹ ದೊಡ್ಡ ಗೊಂದಲ ಈ ಕಾರ್ಖಾನೆಯಲ್ಲಿ ನಡೆದಿದೆ. ಎಷ್ಟೋ ಸಾರ್ವಜನಿಕ ಉದ್ದಿಮೆಗಳು ಲಾಸ್ ಆಗುತ್ತಿದ್ದು ಇದೂ ಅದೇ ಸಾಲಿಗೆ ಹೋಗಬೇಕೆ ? ಇವತ್ತು ಛೇರ್ಮನ್ ಸೀಟನ್ನು ಯಾರಿಗಾದರೂ ಕೊಡಬೇಕೆಂದರೆ ಆ ಕ್ಷೇತ್ರದಲ್ಲಿ ಟೆಕ್ನಿಕಲ್ ಎಕ್ಸ್‌ಪರ್ಟ್ ಆಗಿರುವವರಿಗೆ ಕೊಡಿ. ಕೇವಲ ಸಂಬಳ, ಟಿ. ಎ. ಡಿ. ಎ. ಗೋಸ್ಕರ ಒಬ್ಬರನ್ನು ಛೇರ್ಮನ್ ಮಾಡಿದರೆ ಖಂಡಿತಾ ಫ್ಯಾಕ್ಟರಿ ಮುಂದೆ ಬರುವುದಿಲ್ಲ.

ಇಂತಹ ಫ್ಯಾಕ್ಟರಿಗಳನ್ನು ವೈಂಡ್ ಅಪ್ ಮಾಡುತ್ತೇವೆನ್ನುವ ರೀತಿಯಲ್ಲಿ ಬಜೆಟಿನಲ್ಲಿ ಹೇಳಲಾಗಿರುತ್ತದೆ. ಈಗ ಅಲ್ಲಿ ಆಗಿರತಕ್ಕ ಅನ್ಯಾಯವನ್ನು ಸರಿಪಡಿಸುತ್ತಿರಾ ಎಂದು ಕೇಳಂತ್ತೇನೆ ಈಗಾಗಲೇ ಅಲ್ಲಿ ವರ್ಕರ್ಸ್ ಗುಂಪು ಎರಡಾಗಿ ಡಿವೈಡ್ ಆಗಿರುತ್ತದೆ. ಇದನ್ನೆಲ್ಲಾ ಯಾವ ರೀತಿ ತಾವು ಸರಿಪಡಿಸುತ್ತೀರಿ ಎಂದು ನಾನು ಕೇಳುತ್ತೇನೆ.

12.30 P. M.

SMT. MUKTHARUNNISSA — Mr. Speaker, the only surprise here is that in every industry always the workers do not support the Managing Director or the Management. But, in this case all the workers supported the Managing Director. According to the rules they conducted the meeting and as per the resolution of the Board they suspended 3 officers. I would like to ask as to wheter is it a fact that the Managing Director and the Chairman have got any differences? When they have suspended 3 officers, when the Chairman has taken charge, how they had taken back those officers and how you have permitted long leave to the Managing Director? When the Additional Industries Director has already got more burden on him, how he is in charge of Mysore Lac and Paints? According to the resolution it is a open secret that there is some-mis-appropriation which the workers and labourers also know. How the Government has not taken action up to now? I would request that when you are going to take the new Managing Director and also how you have taken three officials back?

(MR. DEPUTY SPEAKER IN THE CHAIR)

SRI VEDANTHA HEMMIGE. — On 1-12-86 the Managing Director has given a compl int that his personal cash of about Rs. 4,000/ and his personal files are missing. Can he keep Rs. 4 000/ as personal money in the factory? He has also given complaint that his confidential documents and records are missing. Whether those confidential documents are concerned to the factory or whether they are concerned to his personal property?

ಶ್ರೀ ಜೆ.ಎಚ್. ಪಟೇಲ್ (ಕೈಗಾರಿಕಾ ಮಂತ್ರಿಗಳು).— ಮಾನ್ಯ ಉಪಾಧ್ಯಕ್ಷರೆ. ಮೈಸೂರು ಅರಗು ಮತ್ತು ಬಣ್ಣದ ಕಾರ್ಖಾನೆಯ ಬಗ್ಗೆ ಈಗಾಗಲೇ ಕೆಲವು ಸದಸ್ಯರುಗಳು ಪ್ರಸ್ತಾಪ ಮಾಡಿರುವುದಕ್ಕೆ ನಾನು ಈಗಾಗಲೇ ಕೆಹೇಳಿದ್ದೇನೆ. ಮುಖ್ಯವಾಗಿ ಅಲ್ಲಿನೌಕರರಿಗೆ ಸಂಬಳ ಕೊಡುತ್ತಿಲ್ಲವೆನ್ನುವುದು ಒಂದು. ಕಾನೂನಿಗೆ ವಿರುದ್ಧವಾಗಿ ಬೇರೆ ಕಡೆ ಸರ್ವೆ ಮಾಡಿದ್ದಾರೆ. ಅನಂತರ ಚೆಕ್ ಕೊಟ್ಟರುವಾಗ ಹಿಂದಿನ ವ್ಯವಸ್ಥಾಪಕ ನಿರ್ದೇಶಕರು ಇಲ್ಲದೇ ಇರುವುದರಿಂದ ಈಗ ಹಣದ ಸಮಸ್ಯೆ ಇದೆಯೆಂದು ಹೇಳಿಕೆ ಕೊಟ್ಟಿದ್ದಾರೆ. ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರತಕ್ಕದ್ದು ಈಗಿರತಕ್ಕ ಅಧ್ಯಕ್ಷರು ನಿಯುಕ್ತರಾದ ಮೇಲೆ ಅಲ್ಲಿಗೆ ಹೋದಾಗ ಅಲ್ಲಿದ್ದಂತಹ ವ್ಯವಸ್ಥಾಪಕ ನಿರ್ದೇಶಕರು ಅಧ್ಯಕ್ಷರು ಕೆಲಸ ಮಾಡುವ ವಿಧಾನದಲ್ಲಿ ಹೊಂದಾಣಿಕೆ ಆಗದ ಕಾರಣ ನಾನಾ ರೀತಿಯ ಸುದ್ದಿಗಳು ಪತ್ರಿಕೆಗಳಲ್ಲಿ ಬಂದಿವೆ. ಈ ರೀತಿ ಅಧ್ಯಕ್ಷರು ಹೇಳಿದರು, ಈ ರೀತಿ ಮ್ಯಾನೇಜಿಂಗ್ ಡೈರೆಕ್ಟರ್ ಹೇಳಿದರು ಎಂದು ಪತ್ರಿಕೆಗಳಲ್ಲಿ ಸುದ್ದಿಗಳು ಬಂದಿವೆ. ಸಾರ್ವಜನಿಕ ವಲಯದಲ್ಲಿರತಕ್ಕ ಕಾರ್ಖಾನೆಗಳಲ್ಲಿ ಅಧ್ಯಕ್ಷರೇ ಆಗಲಿ, ವ್ಯವಸ್ಥಾಪಕ ನಿರ್ದೇಶಕರೇ ಇರಲಿ ಈ ತರಹ ಬಹಿರಂಗ ಹೇಳಿಕೆ

ಗಳಲ್ಲಿ ಕೊಡುವುದು ಸರಿಯಲ್ಲವೆಂದು ಹೇಳಿದ ಮೇಲೆ ಅವರು ತಕ್ಷಣ ನಿಲ್ಲಿಸಿದ್ದಾರೆ. ಇದು ನಿಮ್ಮ ವ್ಯವಹಾರವಲ್ಲವೆಂದು ಹೇಳಿದ್ದೇವೆ. ಆಲ್ಲಿಗೆ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಕಳಂಹಿಸುವುದು ಕಂಪನಿಯಲ್ಲಿ ಕೆಲಸ ಮಾಡುವುದಕ್ಕೆ ಅಲ್ಲಿ ಮ್ಯಾನೇಜಿಂಗ್ ಡೈರೆಕ್ಟರ್‌ರವರದೇ ಒಂದು ಗುಂಪು, ಅಧ್ಯಕ್ಷರದೇ ಒಂದು ಮಾಡಿಕೊಂಡು ಕೆಲಸ ಮಾಡುವುದಕ್ಕೆ ನಿಯುಕ್ತ ಮಾಡಿಲ್ಲ, ಯಾರೇ ತಪ್ಪು ಮಾಡಿರಲಿ, ಅಧ್ಯಕ್ಷರೇ ತಪ್ಪು ಮಾಡಿದ್ದಾರೆ ಕಾನೂನು ಪ್ರಕಾರ ಆಗಬೇಕಾದ ಪ್ರತಿಕ್ರಿಯೆ ಆಗಂತ್ತದೆ. ಪ್ರತಿಯೊಂದು ವಿಷಯದಲ್ಲಿ ಚೆಕ್, ಪರ್ಸ್, ಕಾರು ಹೀಗೆ ಬಿಟ್ಟರು ಈ ವ್ಯವಹಾರಗಳನ್ನೆಲ್ಲ ಗಮನಿಸಿದ್ದೇನೆ. ಸಿ.ಓ.ಡಿ. ತನಿಖೆ ಮಾಡಲಿಕ್ಕೆ ಕೇಳಿದ್ದಾರೆ, ಅದರ ಅವಶ್ಯಕತೆ ಇಲ್ಲ. ನಮ್ಮ ಡಿಪಾರ್ಟ್‌ಮೆಂಟ್‌ನಿಂದ ತನಿಖೆ ಮಾಡಿಸಿ ಕಂಪನಿ ಲಾಸ್‌ನಾನು ಮಾಡಿದ್ದರೆ ತಪ್ಪಿತಸ್ಥರನ್ನು ಆನ್ಸರಬಲ್ ಮಾಡುತ್ತೇನೆ. ಸಸ್ಪೆಂಡ್ ಆಗಿರತಕ್ಕಂಥ ಮೂರು ಜನ ನೌಕರರನ್ನು ಮತ್ತೆ ಏಕೆ ತೆಗೆದುಕೊಂಡರು ? ಈಗ ತನಿಖೆ ಮಾಡಿಸುತ್ತೇನೆ. ಸಸ್ಪೆನ್‌ಷನ್ ಕ್ರಮಬದ್ಧವಾಗಿಲ್ಲದೇ ಹೋದರೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ. ನಾನು ಮಾನ್ಯ ಸದಸ್ಯರಲ್ಲಿ ಕೇಳಿಕೊಳ್ಳುವುದು ಇಷ್ಟೆ. ಕೆಲವು ಸಾರಿ ಬಹಳ ಬಣ್ಣಬಣ್ಣವಾಗಿ ಪತ್ರಿಕೆಗಳಲ್ಲಿ ಬರುತ್ತದೆ. ನಾನು ಮಾನ್ಯ ವಿರೋಧಪಕ್ಷದ ಉಪ ನಾಯಕರ ಮಾತನ್ನು ಒಪ್ಪುತ್ತೇನೆ. ಈ ಕಾರ್ಖಾನೆಗಳನ್ನು ನಡೆಸುವಾಗ ನಾವು ರಾಜಕೀಯ ವ್ಯಕ್ತಿಗಳನ್ನು ಅಪಾಯಿಂಟ್ ಮಾಡುವುದು, ನೀವು ಮಾಡಿಕೊಂಡು ಬಂದಿದ್ದನ್ನು ನಾವು ಮಾಡಬೇಕಾಗಿದೆ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅಧ್ಯಕ್ಷರೇ, ಇವರುಗಳೆಲ್ಲ ತಪ್ಪಿಸಿಕೊಳ್ಳುವುದು ಹೇಗೆಂದರೆ ನೀವು ಮಾಡಿದ್ದೀರಿ ಆದ್ದರಿಂದ ನಾವು ಮಾಡುತ್ತೇವೆ ಎಂದು ಹೇಳುವುದು. ಕೇಂದ್ರ ಸರ್ಕಾರ ಮಾಡಿದೆ, ನಾವು ಮಾಡಿದ್ದೇವೆ ಎಂದು ಹೇಳುತ್ತಾರೆ. ಇದನ್ನೆಲ್ಲಾ ಬಿಟ್ಟು ನೀವೆಷ್ಟು ಪ್ರೋಗ್ರೆಸ್ಸಿವ್ ಆಗಿದ್ದೀರಿ ಎನ್ನುವುದನ್ನು ಹೇಳಿ?

ಶ್ರೀ ಜೆ. ಹೆಚ್. ಪಟೇಲ್.— ಇದು ನಮ್ಮ ವ್ಯವಸ್ಥೆಯಲ್ಲಿ ಇರತಕ್ಕಂಥ ದೋಷ. ಇದನ್ನು ಯಾರೇ ಮಾಡಿರಲಿ, ಅವರು ಮಾಡಿರಲಿ, ನಾವು ಮಾಡಿರಲಿ. ಇದನ್ನು ಏಕಾಏಕಿಯಾಗಿ ನಿಲ್ಲಿಸಲಿಕ್ಕೆ ಆಗುವುದಿಲ್ಲ ಸೂಕ್ತ ಸಮಯದಲ್ಲಿ ನಿಲ್ಲಿಸುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಇಲ್ಲಿ ಏನಾಗಿದೆಯೆಂದರೆ, ಸುಮ್ಮನೆ ಕೇಳಬೇಕು ಅಥವಾ ಏನಾದರೂ ಉತ್ತರ ಪಡೆಯಬೇಕು, ನಿಮ್ಮನ್ನು ಇಕ್ಕಟ್ಟಿಗೆ ಸಿಕ್ಕಿಸಬೇಕು ಎಂದು ಅಲ್ಲ. ಇರುವ ಪ್ರಶ್ನೆ ಏನು ಎಂದರೆ ಇಲ್ಲಿಯವರೆಗೆ ಬಹಳ ಚೆನ್ನಾಗಿ ನಡೆದುಕೊಂಡು ಬಂದಂಥ ಈ ಫ್ಯಾಕ್ಟರಿಗೆ ಅಧ್ಯಕ್ಷರು ಹೋದಮೇಲೆ ಏಕೆ ಈಪ್ರಶ್ನೆ ಬಂತು? ಅವರು ಒಂದು ಹೇಳಿಕೆ ಕೊಡುವುದು ಮ್ಯಾನೇಜಿಂಗ್ ಡೈರೆಕ್ಟರ್ ಮತ್ತೊಂದು ಹೇಳಿಕೆ ಕೊಡುವುದು ನಡೆದರೆ ಇಲ್ಲಿ ಹೊಂದಾಣಿಕೆ ಹೇಗೆ ಇರಂತ್ತದೆ? ಮ್ಯಾನೇಜಿಂಗ್ ಡೈರೆಕ್ಟರ್ ಇಬ್ಬರು, ಒಬ್ಬರಲ್ಲ. ಚೆನ್ನಾಗಿ ಕೆಲಸ ಮಾಡಿದರೆ ನೀವು ಯಾರನ್ನೂ ಇಟ್ಟುಕೊಳ್ಳುವುದಿಲ್ಲ. ಟ್ರಾನ್ಸ್‌ಫರ್ ಮಾಡುತ್ತೀರಿ. ಚೇರ್ಮನ್ನರನ್ನು ಇಟ್ಟುಕೊಳ್ಳುತ್ತೀರಿ: ರಾಜಕೀಯವಾಗಿ ಅವರನ್ನು ಇಟ್ಟುಕೊಳ್ಳಬೇಕಾಗುತ್ತದೆ. ಇದಕ್ಕೆ ಏನಾದರೂ ಮಾಡಿ ಸೂಕ್ತ ಪರಿಹಾರ ಕಂಡುಹಿಡಿಯಬೇಕು. ಇಲ್ಲದಿದ್ದರೆ ನಷ್ಟದಲ್ಲಿ ನಡೆಯುತ್ತಿರುವ ಫ್ಯಾಕ್ಟರಿಗಳ ಸಾಲಲ್ಲಿ ಇದು ಕೂಡ ಸೇರಿ ಮಂತ್ತಷ್ಟು ಲಾಸ್ ಆಗುತ್ತದೆ. ಇದರ ಬಗ್ಗೆ ನಿರ್ದಿಷ್ಟವಾಗಿ ತಾವು ಒಂದು ಕಾರ್ಯಕ್ರಮ ತೆಗೆದುಕೊಳ್ಳಬೇಕು.

ಶ್ರೀ ಬಿ. ಬಸವಲಿಂಗಪ್ಪ.— ಮಾನ್ಯ ಉಪಾಧ್ಯಕ್ಷರೆ.....

ಉಪಾಧ್ಯಕ್ಷರು.— ಮಾನ್ಯ ಬಸವಲಿಂಗಪ್ಪನವರೇ ದಯವಿಟ್ಟು ಈಗ ಬೇಡ. ಇದು ಗಮನ ಸೆಳೆಯುವ ಸೂಚನೆ, ಇದರಲ್ಲಿ ನಿಮಗೆ ಅವಕಾಶ ಇಲ್ಲ.

ಶ್ರೀ ಬಿ. ಬಸವಲಿಂಗಪ್ಪ.— ಅಧ್ಯಕ್ಷರ ಹಾಗೆ ನೀವೂ ಮಾಡ್ತೀರಲ್ಲ. ಕಾಂಗ್ರೇಸ್ ಸರ್ಕಾರ ಮಾಡಿದ್ದನ್ನು ನಾವು ಮಾಡಿಕೊಂಡು ಬಂದಿದ್ದೇವೆ ಎನ್ನುವುದು ಇವರ ವಾದ. ನಾವು ಮಾಡಿದ್ದುದು ಎಂದೇ ಇಟ್ಟುಕೊಳ್ಳೋಣ. ನನಗೆ ಗೊತ್ತಿಲ್ಲ ಮಾಡಿದ್ದೇವೋ ಇಲ್ಲವೋ ನೀವೂ ಹಾಗೆ ಮಾಡಿದರೆ ನಮ್ಮಹಾಗೆ ಪಂಚೆಗೆ ಹೋಗಬೇಕೆಂದು ಮಾಡಿದ್ದೀರೇನು?

ಶ್ರೀ ಜೆ. ಹೆಚ್. ಪಟೇಲ್.— ನಾವು ಹೋಗದೇ ಇರೋದಕ್ಕೆ ಏನು ಬೇಕೋ ಅದನ್ನು ಮಾಡುತ್ತೇವೆ. ಆದರ ಬಗ್ಗೆ ತಾವು ಚಿಂತೆ ಮಾಡುವುದು ಬೇಡ. ಆದರೆ ಇಲ್ಲಿ ಬಹಳ ಮುಖ್ಯವಾದ ವಿಷಯ ಏನೆಂದರೆ, ಈ ಕಾರ್ಖಾನೆಗೆ ಈಗ ಸ್ವಲ್ಪ ಆರೋಗ್ಯ ಬಂದಿದೆ. ಕಳೆದ ವರ್ಷದ ಸ್ವಲ್ಪ ಲಾಭ

ವನ್ನೂ ಮಾಡಿದೆ. ಮತ್ತೆ ಇದು ರೋಗಗ್ರಸ್ಥ ಕಾರ್ಖಾನೆಗಳ ಸಾಲಿಗೆ ಸೇರಬಾರದು. ಅದನ್ನು ಸರಿಪಡಿಸುವುದಕ್ಕೋಸ್ಕರ, ಈಗಾಗಲೇ ಕೆಲವು ನಿಶ್ಚಿತವಾದಂಥ ಆರೋಪವನ್ನು ಒಬ್ಬರ ಮೇಲೆ ಒಬ್ಬರು ಮಾಡಿದ್ದಾರೆ. ಅದನ್ನು ಇಲ್ಲಿ ಪ್ರಸ್ತಾಪ ಮಾಡುವುದು ಅನಾವಶ್ಯಕ. ಡಿಸ್ಟ್ರಿಕ್ಟ್ ಇಂಡಸ್ಟ್ರಿಯಲ್ ಸೆಂಟರ್‌ನ ಜನರಲ್ ಮ್ಯಾನೇಜರ್ ಈಗ ಈಫ್ಯಾಕ್ಟರಿಯ ಇನ್‌ಚಾರ್ಜ್ ಆಗಿದ್ದಾರೆ. ಈ ಆರೋಪ, ಪ್ರತ್ಯಾರೋಪಗಳನ್ನು ಏನು ಮಾಡಿದ್ದಾರೆ, ಅದರ ಸತ್ಯಾಸತ್ಯತೆಗಳನ್ನು ಕಂಡುಹಿಡಿದ ಮೇಲೆ ನಾನು ಮಾತನಾಡುತ್ತೇನೆ.

ಶ್ರೀ ಜಿ. ರಾಜುಗೌಡ.— ಸ್ವಾಮಿ, ಮೂವರು ಅಧಿಕಾರಿಗಳನ್ನು ಅಮಾನತ್ತುಗೊಳಿಸುವ ವಿಷಯದಲ್ಲಿ ಮತ್ತು ಮತ್ತೆ ಅಪಾಯಿಂಟ್‌ಮೆಂಟ್ ಮಾಡಿಕೊಳ್ಳುವ ವಿಷಯದಲ್ಲಿ ಎರಡು ಸಭೆಗಳಲ್ಲಿ. ಎರಡು ವಿಭಿನ್ನವಾದ ಅಭಿಪ್ರಾಯ ಸೂಚಿಸಿದ್ದಾರೆ, ಒಂದು ಸಾರಿ ಅಮಾನತ್ತು ಎಂದು ತೀರ್ಮಾನ ಮಾಡಿದ್ದಾರೆ, ಮತ್ತೊಂದು ಸಭೆಯಲ್ಲಿ ನಿರಪರಾಧಿಗಳು ಕೆಲಸಕ್ಕೆ ತೆಗೆದುಕೊಳ್ಳಿ ಎಂದು ಅಭಿಪ್ರಾಯ ಸೂಚಿಸಿದ್ದಾರೆ. ಈ ರೀತಿ ಮಾಡಿರುವುದಕ್ಕೆ ಅವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಜೆ. ಹೆಚ್. ಪಟೇಲ್.— ಅವರು ಸಮಯ, ಸಮಯಕ್ಕೊಂದು ತೀರ್ಮಾನ ತೆಗೆದು ಕೊಂಡಿದ್ದಾರೆ. ಏಕೆ ಈ ರೀತಿಯ ತೀರ್ಮಾನ ತೆಗೆದುಕೊಂಡಿದ್ದಾರೆ ಎನ್ನುವುದನ್ನು ವಿಚಾರ ಮಾಡಬೇಕಾಗುತ್ತದೆ.

ಶ್ರೀ ವೇದಾಂತ ಹೆಮ್ಮಿಗೆ.— ಆರು ತಿಂಗಳಿಗೆ ಮುಂಚೆ ಒಂದು ತೀರ್ಮಾನವನ್ನು ಬದಲಾವಣೆ ಮಾಡುವ ಹಾಗಿಲ್ಲ. ಅವರು ಕಾನೂನು ಉಲ್ಲಂಘನೆ ಮಾಡಿದ್ದಾರೆ. ಸಂಬಂಧಿಸಿದ ಸಚಿವರು ಈ ಬಗ್ಗೆ ಗಮನಹರಿಸಬೇಕು.

ಶ್ರೀ ಜೆ. ಹೆಚ್. ಪಟೇಲ್.— ಇದನ್ನು ಕ್ರಮಬದ್ಧವಾಗಿ ಮಾಡಲಾಗುವುದು.

ನಿಯಮ ೬೩ರ ನಿಯಮದ ಮೇರೆಗೆ

i) ಚಿತ್ರದುರ್ಗ ಜಿಲ್ಲೆಯಲ್ಲಿ ಅಭಾವ ಪರಿಹಾರ ಕಾಮಗಾರಿಗಳನ್ನು ಕೈಗೊಳ್ಳುವುದು

ಶ್ರೀ ಜೆ. ಹೆಚ್. ಆಶ್ವತ್ಥರೆಡ್ಡಿ (ಜಗಳೂರು).— ಸನ್ಮಾನ್ಯ ಉಪಾಧ್ಯಕ್ಷರೇ, ಚಿತ್ರದುರ್ಗ ಜಿಲ್ಲೆಯಲ್ಲಿ ಆದರಲ್ಲೂ ವಿಶೇಷವಾಗಿ ಚಿತ್ರದುರ್ಗ, ಜಗಳೂರು, ಹಿರಿಯೂರು, ಚಳ್ಳಕೆರೆ, ಹೊಳಲ್ಕೆರೆ, ಮೊಳಕಾಲ್ಮೂರು ಹಾಗೂ ಹೊಸದುರ್ಗ ತಾಲ್ಲೂಕುಗಳಲ್ಲಿ ಅಭಾವ ಪರಿಹಾರ ಕಾರ್ಯಕ್ರಮದ ಮೇರೆಗೆ ಕಾಮಗಾರಿಕೆಗಳನ್ನು ಕೈಗೊಳ್ಳದಿರುವುದರಿಂದಾಗಿ ಕೃಷಿ ಕಾರ್ಮಿಕರಿಗೆ ಹಾಗೂ ಕೂಲಿಕಾರರಿಗೆ ಬಹಳ ತೊಂದರೆಯಾಗಿದ್ದು, ಕೂಡಲೇ ಅಭಾವ ಪರಿಹಾರ ಕಾಮಗಾರಿಕೆಗಳನ್ನು ಚಿತ್ರದುರ್ಗ ಜಿಲ್ಲೆಯಲ್ಲಿ ಕೈಗೊಂಡು, ಕೃಷಿ ಕಾರ್ಮಿಕರಿಗೆ ಕೆಲಸ ಒದಗಿಸುವ ವ್ಯವಸ್ಥೆ ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಂದಾಯ ಸಚಿವರ ಪರವಾಗಿ).— ಸನ್ಮಾನ್ಯ ಉಪಾಧ್ಯಕ್ಷರೇ, ೧೯೮೬-೮೭ನೇ ಸಾಲಿನಲ್ಲಿ ಚಿತ್ರದುರ್ಗ ಜಿಲ್ಲೆಯ ನಾಲ್ಕು ತಾಲ್ಲೂಕುಗಳಾದ ಚಿತ್ರದುರ್ಗ, ಹಿರಿಯೂರು, ದಾವಣಗೆರೆ ಜಗಳೂರುಗಳಲ್ಲಿನ ೧೯೭ ಹಳ್ಳಿಗಳನ್ನು ಬರಗಾಲ ಪೀಡಿತವಾಗಿದ್ದು, ಅವರಲ್ಲಿನ ೨೫೩,೪೪೨ ಜನರು ಹಾಗೂ ೯೭,೦೨೫ ಜಾನುವಾರಗಳು ಬರಗಾಲದ ಬವಣೆಗೆ ತುತ್ತಾಗಿರುವವರು. ಇದರಲ್ಲಿ ಕೃಷಿ ಕಾರ್ಮಿಕರು, ಕೂಲಿಕಾರರು ಅಲ್ಲದೇ ಸಣ್ಣ ಮಂತ್ತು ಅತಿ ಸಣ್ಣ ರೈತರು ಸೇರಿದ್ದಾರೆ. ಬರಪೀಡಿತ ಪ್ರದೇಶದ ಜನರಿಗೆ ಉದ್ಯೋಗ ಒದಗಿಸುವ ಸಲುವಾಗಿ ೫೪೫.೬೭ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಚಿತ್ರದುರ್ಗ ಜಿಲ್ಲೆಯಲ್ಲಿ ಕಾಮಗಾರಿ ಕೆಲಸಗಳನ್ನು ತೆಗೆದುಕೊಂಡು ೨೬.೯೪ ಲಕ್ಷ ಮಾನವ ದಿನಗಳನ್ನು ಸೃಜಿಸಿದೆ. ಜಾನುವಾರುಗಳಿಗೆ ಮೇವು ಪೂರೈಕೆಗಾಗಿ ಜಿಲ್ಲೆಯಲ್ಲಿ ಆರು ಮೇವು ಬ್ಯಾಂಕುಗಳನ್ನು ಸ್ಥಾಪಿಸಲಾಗಿದೆ. ಇದಲ್ಲದೇ ಇತರೇ ಇಲಾಖಾ ಯೋಜನಾ ಕಾರ್ಯಕ್ರಮಗಳಡಿಯಲ್ಲಿ ಮೊರೆಯಾವ ಹಣವನ್ನು ಉಪಯೋಗಿಸಿಕೊಂಡು ಪರಿಹಾರ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವಂತೆ ಈಗಾಗಲೇ ಆದೇಶಗಳನ್ನು ಹೊರಡಿಸಲಾಗಿದೆ.